## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಾವೇರಿ ಜಿಲ್ಲೆಯ ಬ್ಯಾಡಗಿ ವಿಧಾನಸಭಾ ಕ್ಷೇತ್ರದ ನಾಗನೂರು ಗ್ರಾಮದ ಬದಲಾಗಿ ಹಾವೇರಿ ತಾಲ್ಲೂಕಿನ ಹಿರೇಲಿಂಗದಹಳ್ಳಿ ಗ್ರಾಮವನ್ನು ಗ್ರಾಮ ವಿಕಾಸ ಯೋಜನೆಯಡಿ ಪರಿಗಣಿಸಿ ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ : 50 : ಸುಗ್ರಾಯೋ : 2014, ದಿ:20.10.2014.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ : 63 :ಗ್ರಾವಿಯೊ : 2015, ಬೆಂಗಳೂರು, ದಿನಾಂಕ: 28-08-2015.
3. ಮಾನ್ಯ ಶಾಸಕರು ಮತ್ತು ಮಾಜಿ ಮಂತ್ರಿಗಳು, ಬ್ಯಾಡಗಿ ವಿಧಾನ ಸಭಾ ಕ್ಷೇತ್ರ ಇವರ ಪತ್ರ ದಿನಾಂಕ: 14.10.2015.

### <u>ತಿದ್ದುಪಡಿ ಆದೇಶ</u>

**ಪ್ರಸ್ತಾವನೆ:**

ರಾಜ್ಯದ ಎಲ್ಲಾ ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ಉಲ್ಲೇಖಿತ (1) ರ ಆದೇಶದಂತೆ ಅನುಷ್ಠಾನಗೊಳಿಸಲಾಗಿದೆ ಅದರಂತೆ ಸರ್ಕಾರಿ ಆದೇಶದಲ್ಲಿ ಹಾವೇರಿ ಜಿಲ್ಲೆಯ ಬ್ಯಾಡಗಿ ವಿಧಾನ ಸಭಾ ಕ್ಷೇತ್ರದಿಂದ 5 ಗ್ರಾಮಗಳಾದ ಹೊಂಬರಡಿ, ಸೂಡಂಬಿ, ನಾಗನೂರು, ಕೆರವಡಿ ಮತ್ತು ಹನಮಾಪುರ ಗ್ರಾಮಗಳಿಗೆ ಉಲ್ಲೇಖ (2) ರಂತೆ ಸರ್ಕಾರಿ ಆದೇಶ ಹೊರಡಿಸಲಾಗಿದೆ.

ಓದಲಾದ ಉಲ್ಲೇಖ (3) ರಲ್ಲಿ ಮಾನ್ಯ ಶಾಸಕರು, ಬ್ಯಾಡಗಿ ವಿಧಾನ ಸಭಾ ಕ್ಷೇತ್ರ ಇವರು ಬ್ಯಾಡಗಿ ವಿಧಾನ ಸಭಾ ಕ್ಷೇತ್ರದ ನಾಗನೂರು ಗ್ರಾಮದ ಬದಲಾಗಿ ಅತೀ ಅವಶ್ಯವಿರುವ ಹಾವೇರಿ ತಾಲ್ಲೂಕಿನ ಹಿರೇಅಂಗದಹಳ್ಳಿ ಗ್ರಾಮವನ್ನು ಗ್ರಾಮ ವಿಕಾಸ ಯೋಜನೆಯಡಿ ಪರಿಗಣಿಸಲು ಕೋರಿರುತ್ತಾರೆ.

ಉಲ್ಲೇಖ (1) ರ ಆದೇಶದಲ್ಲಿ ಗ್ರಾಮ ವಿಕಾಸ ಯೋಜನೆಗೆ ನಿಗದಿಪಡಿಸಿರುವ ಗರಿಷ್ಠ ಗ್ರಾಮಗಳು ಹಾಗೂ ರೂ. 3.75 ಕೋಟಿ ಅನುದಾನದ ಮಿತಿಯೊಳಗೆ ಪ್ರಸ್ತಾವನೆಯು ಇರುವುದರಿಂದ ಸರ್ಕಾರವು ಗ್ರಾಮಗಳ ಬದಲಾವಣೆಗೆ ಮಂಜೂರಾತಿ ನೀಡಲು ಪರಿಶೀಲಿಸಲಾಗಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ : 15 : ಗ್ರಾವಿಯೋ : 2015, ಬೆಂಗಳೂರು, ದಿನಾಂಕ: 30-12-2015**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಹಾವೇರಿ ಜಿಲ್ಲೆಯ ಬ್ಯಾಡಗಿ ವಿಧಾನಸಭಾ ಕ್ಷೇತ್ರದ ಗ್ರಾಮಗಳನ್ನು ಮತ್ತು ಅನುದಾನವನ್ನು ಅನುಬಂಧದಲ್ಲಿರುವಂತೆ ಪುನರ್ ಹಂಚಿಕೆ ಮಾಡಿ ಗ್ರಾಮ ವಿಕಾಸ ಯೋಜನೆಯಡಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಗ್ರಾಮಗಳ ಆಯ್ಕೆಪಟ್ಟಿಯಲ್ಲಿ ವಿವರಿಸಿರುವಂತೆ ಗ್ರಾಮಗಳಿಗೆ ನಿಗದಿಪಡಿಸಿರುವ ಅನುದಾನದ ಮಿತಿಯಂತೆ ಕ್ರಮ ವಹಿಸುವುದು.

2. ಗ್ರಾಮ ಪಂಚಾಯತಿಗಳು ವಾರ್ಡ್‌ಸಭೆ / ಗ್ರಾಮಸಭೆಗಳನ್ನು ನಡೆಸಿ ಗ್ರಾಮಾಭಿವೃದ್ಧಿ ಯೋಜನೆಯನ್ನು ಮಾರ್ಗಸೂಚಿಯಲ್ಲಿರುವಂತೆ ತಯಾರಿಸಿ ಗ್ರಾಮ ಪಂಚಾಯತಿಯ ಅನುಮೋದನೆಯನ್ನು ಪಡೆಯುವುದು. ಅನುಮೋದನೆಯಾದ ಗ್ರಾಮಾಭಿವೃದ್ಧಿ ಯೋಜನೆಯನ್ನು ತಾಲ್ಲೂಕು, ಜಿಲ್ಲಾ ಪಂಚಾಯತಿ ಹಾಗೂ ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸುವುದು.

3. ಗ್ರಾಮ ಪಂಚಾಯತಿಗಳು ಎಸ್‌ಸಿಪಿ / ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಕಾಲೋನಿಗಳ ಅಭಿವೃದ್ಧಿಗೆ ಕೈಗೊಳ್ಳುವ ಕ್ರಿಯಾ / ಗ್ರಾಮಾಭಿವೃದ್ಧಿ ಯೋಜನೆಯನ್ನು ಪ್ರತ್ಯೇಕವಾಗಿ ಕಡ್ಡಾಯವಾಗಿ ತಯಾರಿಸುವುದು.

4. ಎಸ್‌ಸಿಪಿ - ಟಿಎಸ್‌ಪಿ ಯೋಜನೆಯಡಿ ಕ್ರಿಯಾ ಯೋಜನೆಯನ್ನು ತಯಾರಿಸುವಾಗ ಒಟ್ಟು ಅನುದಾನದ ಪೈಕಿ ಕನಿಷ್ಠ ಶೇ.18% ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ವರ್ಗದವರಿಗೆ ಮತ್ತು ಕನಿಷ್ಠ ಶೇ.7% ರಷ್ಟು ಅನುದಾನವನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡುವುದು.

5. ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ 4 ಗ್ರಾಮಗಳ ಪೈಕಿ ~~ಹೆಚ್ಚು ಎಸ್‌ಸಿ~~, ಎಸ್‌ಟಿ ಜನಸಂಖ್ಯೆ ಹೊಂದಿರುವ 2 ಗ್ರಾಮಗಳನ್ನು ಆಯ್ಕೆ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುವ ಕಾಲೋನಿಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದು.

6. ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದವರಿಗೆ ಮೀಸಲಾದ ಅನುದಾನವನ್ನು ಯಾವುದೇ ಕಾರಣಕ್ಕೂ ಮಾರ್ಗಪಲ್ಲಟ ಮಾಡುವಂತಿಲ್ಲ ಹಾಗೂ ಅನುಮೋದಿತ ಯೋಜನೆಯಂತೆ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಕಾಲೋನಿಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

7. ಗ್ರಾಮ ಪಂಚಾಯತಿಗಳು ಗ್ರಾಮಾಭಿವೃದ್ಧಿ ಯೋಜನೆಯನ್ನು ತಯಾರಿಸುವಾಗ ಮುಖ್ಯ ಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಮಾರ್ಗಸೂಚಿಯ ಪುಟ ಸಂಖ್ಯೆ 27 ರಲ್ಲಿನ 5.1.2 ರಲ್ಲಿ ಸೂಚಿಸಿರುವ ಪರಿಮಾಣಗಳಂತೆ ಅಳವಡಿಸುವುದು ಹಾಗೂ ಕಾರ್ಯಕ್ರಮವಾರು ಭರಿಸುವ ಅನುದಾನವನ್ನು ಸಹ ಪ್ರತ್ಯೇಕವಾಗಿ ನಮೂದಿಸುವುದು.

8. ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾರ್ಗಸೂಚಿ ಪುಸ್ತಕದ ಪುಟ ಸಂಖ್ಯೆ 61 ಮತ್ತು 62 ರಲ್ಲಿರುವ ಯೋಜನೆಯ ಅನುಷ್ಠಾನದ ವೇಳಾಪಟ್ಟಿಯಂತೆ ಅನುಷ್ಠಾನಕ್ಕೆ ತಂದು ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಕ್ಟೋಬರ್ 2, 2016ರ ಒಳಗಾಗಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳುವುದು.

9. ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾದ ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಭೆಯನ್ನು ಕಡ್ಡಾಯವಾಗಿ 2 ತಿಂಗಳಿಗೊಮ್ಮೆ ನಡೆಯುವಂತೆ ಕ್ರಮ ಕೈಗೊಳ್ಳುವುದು. ಪ್ರಗತಿಯನ್ನು ಪರಾಮರ್ಶಿಸಿ ಗ್ರಾಮದ ಅಭಿವೃದ್ಧಿಗೆ ಎಲ್ಲಾ ರೀತಿಯ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಪಡೆದು ಮತ್ತು ವಿವಿಧ ಯೋಜನೆಗಳಲ್ಲಿ ಲಭ್ಯವಾಗುವ ಅನುದಾನವನ್ನು ಒಗ್ಗೂಡಿಸಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದು.

10. ಗ್ರಾಮ ವಿಕಾಸ ಯೋಜನೆಯ ಅನುದಾನ ಹಾಗೂ ಒಗ್ಗೂಡಿಸಿದ ಕಾರ್ಯಕ್ರಮಗಳ ಅನುದಾನವನ್ನು ಪ್ರತ್ಯೇಕ ವಹಿಗಳಲ್ಲಿ (Separate Register) ನಿರ್ವಹಿಸುವುದು ಹಾಗೂ ಆಯಾ ಕಾರ್ಯ ಕ್ರಮಗಳ ಅನುದಾನವನ್ನು ಬಳಸುವಾಗ ಸರ್ಕಾರ ಹೊರಡಿಸಿದ ಆದೇಶ/ ಮಾರ್ಗಸೂಚಿ/ ಸುತ್ತೋಲೆಗಳನ್ವಯ ಅನುಷ್ಠಾನಕ್ಕೆ ತರುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು
2. ಮಹಾಲೇಖಪಾಲರು (ಆಡಿಟ್-1 & 2) ಕರ್ನಾಟಕ, ಬೆಂಗಳೂರು

3. ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಗಳ ಕಾರ್ಯಾಲಯ ವಿಧಾನ ಸೌಧ.
4. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌದ, ಬೆಂಗಳೂರು.
5. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಹಾವೇರಿ.
6. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
7. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
11. ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. ಹಾವೇರಿ.
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
13. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14. ಉಪ ನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖಜಾನಾ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
15. ಜಿಲ್ಲಾ ಖಜಾನಾಧಿಕಾರಿಗಳು ಹಾವೇರಿ.
16. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು.
17. ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.
18. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ.
19. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ.
20. ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ.
21. ಗಣಕಕೋಶ / ವೈಬ್‌ಸೈಟ್/ಮಾಹಿತಿಕೇಂದ್ರ-(10 ಪ್ರತಿಗಳು), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.
22. ಸಂಪಾದಕರು, ಕರ್ನಾಟಕ ವಿಕಾಸ.
23. ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಅನುಬಂಧ

ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ : ಗ್ರಾಅಪ : 15 : ಗ್ರಾವಿಯೋ : 2015, ಬೆಂಗಳೂರು, ದಿನಾಂಕ: 30-12-2015

(ಹಾವೇರಿ ಜಿಲ್ಲೆಯ ಬ್ಯಾಡಗಿ ವಿಧಾನಸಭಾ ಕ್ಷೇತ್ರದ ಗ್ರಾಮಗಳ ಆಯ್ಕೆ ಪಟ್ಟಿ)

(ರೂ .ಲಕ್ಷಗಳಲ್ಲಿ)

| ಜಿಲ್ಲೆ | | ವಿಧಾನ ಸಭಾ ಕ್ಷೇತ್ರ | | ಕ್ರ. ಸ | ಗ್ರಾಮಗಳ ಹೆಸರು | ಪ. ಜಾತಿ | ಪ. ಪಂಗಡ | ಒಟ್ಟು ಜನ ಸಂಖ್ಯೆ | ಗ್ರಾಮವಾರು ನಿಗದಿಪಡಿಸಿದ ಅನುದಾನ | ವಿಧಾನ ಸಭಾ ಕ್ಷೇತ್ರವಾರು ನಿಗದಿ ಪಡಿಸಿದ ಅನುದಾನ |
|---|---|---|---|---|---|---|---|---|---|---|
| 1 | ಹಾವೇರಿ | 1 | ಬ್ಯಾಡಗಿ | 1 | ಹೊಂಬರಡಿ | 405 | 9 | 2286 | 75 | 375 |
| | | | | 2 | ಸೂಡಂಬಿ | 126 | 26 | 2100 | 75 | |
| | | | | 3 | ಹಿರೇಲಿಂಗದಹಳ್ಳಿ | 28 | 45 | 1818 | 75 | |
| | | | | 4 | ಕೆರವಡಿ | 668 | 129 | 2907 | 75 | |
| | | | | 5 | ಹನಮಾಪುರ | 724 | 83 | 3174 | 75 | |
| | | | | | ಒಟ್ಟು | 1951 | 292 | 12285 | 375 | |

(ಬೂವನಹಳ್ಳಿನಾಗರಾಜ್)
ನಿರ್ದೇಶಕರು (ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ